ಸಿ.ಸಿ .ನಂ. 197/2023                              ಪಿಡಬ್ಲೂಃ 1

ದಿನಾಂಕಃ 16-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಕುಮಾರಿ ಪಿ ಹೆಚ್ ಕೆ ವಕೀಲರಿಂದಃ**

3. ನಾನು ಫಿರ್ಯಾದಿ ಶಾಖೆಯಲ್ಲಿ ಕಳೆದ ಆರು ವರ್ಷಗಳಿಂದ ಶಾಖಾ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿರುವ ಸಾಲದ ವ್ಯವಹಾರ ನಡೆದಾಗ ನಾನು ಫಿರ್ಯಾದಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ . ಆ ಸಮಯದಲ್ಲಿ ಶ್ರೀ ಗಣಪತಿ ಶಂಕರ ಗೌಡಾರವರು ಶಾಖಾ ವ್ಯವಸ್ಥಾಪಕರಾಗಿದ್ದರು. ಆ ಸಮಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವ್ಯವಸ್ಥಾಪಕರಿಗೆ ಈ ಪ್ರಕರಣದ ಬಗ್ಗೆ ಹಾಗೂ ಆರೋಪಿಯ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿ ನನಗೂ ಕೂಡ ಮಾಹಿತಿ ಇದೆ ಎಂದು ನುಡಿದಿರುತ್ತಾರೆ.

4. ಆರೋಪಿ ವೈಯಕ್ತಿಕ ಸಾಲ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು . ಸ್ಯಾಲರಿ ಹೊಲ್ಡರಗೆ ವೈಯಕ್ತಿಕ ಸಾಲವನ್ನು ಕೊಡುತ್ತೇವೆ. ಆರೋಪಿಯ ಸ್ಯಾಲರಿ ಸರ್ಟಿಫಿಕೇಟ್ ನ್ನು ಪಡೆದುಕೊಂಡಿದ್ದೇವೆ . ಸದರಿ ಸ್ಯಾಲರಿ ಸರ್ಟಿಫಿಕೇಟ್ ನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ . ಆರೋಪಿ ದಿಃ 05-01-2018ರಂದು ಸಾಲ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು . ಸಾಲದ ಅರ್ಜಿ ಬಂದ ನಂತರ ಶಾಖಾ ವ್ಯವಸ್ಥಾಪಕರು ಸಾಲವನ್ನು ಮಂಜೂರು ಮಾಡಬೇಕು ಎಂದು ಷರಾ ಬರೆಯುತ್ತಾರೆ ಎಂದರೆ ಸರಿ. ಸಾಲದ ಅರ್ಜಿಯನ್ನು ನಮ್ಮ ಶಾಖೆಯಲ್ಲಿ ಸಾಲದ ವಿಭಾಗದವರು ಸ್ವೀಕರಿಸುತ್ತಾರೆ. ಸಾಲದ ಅರ್ಜಿಯನ್ನು ಯಾವ ಸಿಬ್ಬಂದಿಯವರು ಸ್ವೀಕರಿಸಿರುತ್ತಾರೆ ಹೆಸರು ನೆನಪಿಲ್ಲ . ಸಾಲದ ಅರ್ಜಿ ಬಂದ ನಂತರ ಅದನ್ನು ಪ್ರಧಾನ ಕಚೇರಿಗೆ ಕಳುಹಿಸಿ ಸೆಕ್ಷನ್ ಮಾಡಿಸಿಕೊಳ್ಳುತ್ತೇವೆ . ಪ್ರಧಾನ ಕಚೇರಿಯಲ್ಲಿ ಆಡಳಿತ ಮಂಡಳಿಯ ಸಭೆ ಯಾವ ದಿನಾಂಕದಂದು ನಡೆದಿತ್ತು ಎಂದರೆ ಸಾಕ್ಷಿ ಆಡಳಿತ ಸಭೆ ನಡೆಯುವುದಿಲ್ಲ ಪ್ರಧಾನ ಕಚೇರಿಯಲ್ಲಿ ಸಾಲದ ಅರ್ಜಿಯನ್ನು ಪರಿಶೀಲಿಸುತ್ತಾರೆ ಮತ್ತು ಸೆಂಕ್ಷನ್ ಮಾಡುವುದಿದ್ದರೆ ಸೆಂಕ್ಷನ್ ಮಾಡಿ ಕಳುಹಿಸುತ್ತಾರೆ ಎಂದು ನುಡಿದಿರುತ್ತಾರೆ. ಸಾಲ ಸೆಂಕ್ಷನ್ ಮಾಡಿದ ಠರಾವಿನ ಪ್ರತಿಯನ್ನು ನಾನು ಓದಿ ನೋಡಿರುತ್ತೇನೆ. ಠರಾವಿನಲ್ಲಿರುವ ಶರತ್ತುಗಳನ್ನು ದಾಖಲಾತಿ ನೋಡಿ ಹೇಳಬೇಕು . ಠರಾವಿನ ಪ್ರತಿಯನ್ನು ಈ ಕೇಸಿನಲ್ಲಿ

ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಠರಾವು ಪಾಸಾಗಿರುವುದಿಲ್ಲ , ಅರ್ಜಿ ಹೋದ ನಂತರ ಸಾಲ ಮಂಜೂರು ಮಾಡಬೇಕೋ ಬೇಡವೋ ಎಂದು ಪ್ರಧಾನ ಕಚೇರಿಯವರು ರೆಕಮೆಂಡೇಶನ್ ಕಳುಹಿಸುತ್ತಾರೆ ಎಂದು ನುಡಿದಿರುತ್ತಾರೆ. ಆ ರೆಕಮೆಂಡೇಶನ್ ಲೇಟರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ. ಸಾಕ್ಷಿ ಕೇಸಿನ ಕಡತದಲ್ಲಿರುವ ದಾಖಲಾತಿಗಳನ್ನು ನೋಡಿ ರೆಕಮೆಂಡೇಶನ್ ಲೇಟರನ್ನು ಹಾಜರು ಪಡಿಸಿಲ್ಲ ಎಂದು ನುಡಿದಿರುತ್ತಾರೆ . ಸದರಿ ಲೇಟರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಸಾಲದ ಎಲ್ಲಾ ಅರ್ಜಿಗಳು ಮಂಜೂರಾಗುವುದಿಲ್ಲ . ಕೆಲವೊಂದು ಸಾಲದ ಅರ್ಜಿ ಕೆಲವೊಂದು ಸಂದರ್ಭದಲ್ಲಿ ತಿರಸ್ಕೃತಗೊಳ್ಳುತ್ತವೆ ಎಂದರೆ ಸರಿ . ತಿರಸ್ಕೃತ ಅರ್ಜಿಯನ್ನು ನಾವೇ ಬ್ಯಾಂಕಿನಲ್ಲಿ ಇಟ್ಟುಕೊಳ್ಳುತ್ತೇವೆ ಎಂದರೆ ಸರಿ . ನಿಪಿ-7 ರಲ್ಲಿ ನಮ್ಮ ಸಿಬ್ಬಂದಿಗಳು ಸಾಲ ಮಂಜೂರು ಮಾಡಬಹುದು ಎಂದು ಷರಾ ಬರೆದಿಲ್ಲ ಎಂದರೆ ಸಾಕ್ಷಿ ಮ್ಯಾನೇಜರ ಸಹಿ ಹಾಕಿದ್ದಾರೆ ಎಂದು ನುಡಿದಿರುತ್ತಾರೆ . ಸದರಿ ಸಹಿ ನಾವು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸುವಾಗ ಹಾಕಿರುವ ಸಹಿ ಎಂದರೆ ಸರಿ . ಸದರಿ ಸಹಿ ಸಾಲವನ್ನು ಮಂಜೂರು ಮಾಡುವ ಸಮಯದಲ್ಲಿ ಇರುವ ವ್ಯವಸ್ಥಾಪಕರ ಸಹಿ ಅಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ಸಾಲ ಮಂಜೂರು ಮಾಡಲಾಗಿದೆ ಎಂಬ ಷರಾ ಇರುವ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಕ್ಷಿ ಹಾಜರು ಪಡಿಸಬಹುದು ಎಂದು ನುಡಿದಿರುತ್ತಾರೆ . ರೂಪಾಯಿ 1,18,889/- ಆರೋಪಿಯಿಂದ ಬರಬೇಕಾದ ಹಣ ಎಂದು ತೋರಿಸಲು ಅಕೌಂಟ್ ಸ್ಟೇಟ್ ಮೆಂಟ್ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲಗಾರರಿಗೆ ಇಂತಿಷ್ಟು ಸಾಲದ ಹಣವನ್ನು ಸಂದಾಯ ಮಾಡಿಸಿರುತ್ತೇವೆ ಎಂದು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.